ಅಧ್ಯಕ್ಷರು : ಹೌದು, ತಾವು ಹೇಳಿದ್ದೀರಿ. ಆದರೆ ಇವತ್ತು ಶೂನ್ಯವೇಳೆ ಇಟ್ಟುಕೊಂಡಿಲ್ಲ. ಮಾನ್ಯ ರೇವುನಾಯಕ್‌ರವರೂ ಸಹ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಕೇಳಿದ್ದರು. ನಾನು ಏನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆಂದರೆ, ತಾವುಗಳಲ್ಲಿ ನನ್ನ ಗೆಳೆಯರಾಗಿದ್ದೀರಿ, ದಯಮಾಡಿ ನನ್ನ ಆಫೀಸ್‌ಗೆ ಬನ್ನಿ, ನಿಮ್ಮ ಸಮಸ್ಯೆಗೆ ನಾನು ಪರಿಹಾರ ಹುಡುಕಿಕೊಡುತ್ತೇನೆ. ಆದ್ದರಿಂದ ಈಗ ಶೂನ್ಯವೇಳೆ ಪ್ರಾರಂಭ ಮಾಡಿದರೆ ಮತ್ತೆ ಎಲ್ಲರೂ ಎದ್ದುನಿಂತು ಮಾತನಾಡುವುದಕ್ಕೆ ಪ್ರಾರಂಭ ಮಾಡಿಬಿಡುತ್ತಾರೆ. ಇದರಿಂದ ಸಮಯ ಹಾಳಾಗುತ್ತದೆ. ನಿನ್ನೆಯೂ ಸಹ ನಾವು ಸ್ವಲ್ಪ ಬೇರೆ ವಿಷಯ ಚರ್ಚೆಗೆ ತೆಗೆದುಕೊಂಡಿದ್ದರಿಂದ ಬೇಡಿಕೆಗಳ ಮೇಲೆ ಚರ್ಚೆ ಮಾಡಲಿಕ್ಕಾಗಲಿಲ್ಲ. ದಯಮಾಡಿ ಸಹಕರಿಸಬೇಕು. ತಾವು ಮತ್ತು ರೇವು ನಾಯಕ್‌ರವರು ನನ್ನ ಹತ್ತಿರ ನನ್ನ ಆಫೀಸ್‌ಗೆ ಬನ್ನಿ ದಯಮಾಡಿ. ಮಾನ್ಯ ಎಂ. ಶ್ರೀನಿವಾಸ್‌ರವರು ಪ್ರಸ್ತಾಪ ಮಾಡಿ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, ವಿಶ್ವಭಾರತಿ ಗೃಹನಿರ್ಮಾಣ ಸಂಘದ್ದು ನಾನು ಪ್ರಿವಿಲೆಜ್ ಕಮಿಟಿಗೆ ಕಳುಹಿಸಿಕೊಡಬೇಕೆಂದು ಕೇಳಿದ್ದೆ ಅದರ ಬಗ್ಗೆ ಚರ್ಚೆಯಾಗಿತ್ತು.

ಅಧ್ಯಕ್ಷರು : ಹೌದು, ತಾವು ಕಳುಹಿಸಿಕೊಟ್ಟಿದ್ದೀರಿ. ನಾನು ಇಲ್ಲಿ ಏಕೆ ಅದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ I have already taken action on that. I have referred it to the Committee.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ....

MR. SPEAKER : It is a privileged matter. I am looking into it.

ಗಮನಸೆಳೆಯುವ ಸೂಚನೆಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೋದ ಅಬಕಾರಿ ಇಲಾಖೆಯ ಅಧಿಕಾರಿಗಳ ಮೇಲೆ ಅಬಕಾರಿ ಗುತ್ತಿಗೆದಾರರಿಂದ ಹಲ್ಲೆ.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ಬಾಕಿ ವಸೂಲಿ ಮಾಡಲು ಹೋದ ಅಬಕಾರಿ ಇಲಾಖೆಯ ಅಧಿಕಾರಿಗಳ ಮೇಲೆ ದಕ್ಷಿಣ ಕನ್ನಡ ಜಿಲ್ಲೆಯ ಅಬಕಾರಿ ಗುತ್ತಿಗೆದಾರರು ಹಲ್ಲೆ ಮಾಡಿದ್ದು, ಸರ್ಕಾರ ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಕೈಗೊಂಡ ಕ್ರಮದ ಬಗ್ಗೆ ಸದನಕ್ಕೆ ತಿಳಿಸುವಂತೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

+ ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿ) ರವರ ಪರವಾಗಿ ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಉತ್ತರವನ್ನು ಓದುತ್ತಿದ್ದೇನೆ.

ದಿನಾಂಕ 18-6-1997ರಂದು ಬೆಳಿಗ್ಗೆ 11-30 ಗಂಟೆಗೆ ಹಲವಾರು ಚಿಲ್ಲರೆ ಸನ್ನದುಗಳನ್ನು ಹೊಂದಿರುವ ಶ್ರೀ ಎ.ಜೆ. ಶೆಟ್ಟಿ ಮತ್ತು ಅವರ ಸಂಬಂಧಿಕರಾದ ಶ್ರೀ ಗಣೇಶ್ ಶೆಟ್ಟಿ ಎಂಬುವವರು

ಅಬಕಾರಿ ಉಪ ಆಯುಕ್ತರು, ದಕ್ಷಿಣ ಕನ್ನಡ ಜಿಲ್ಲೆ ಅವರ ಕೊಠಡಿಗೆ ಬಂದು ತಾಳ್ಮೆ ಕಳೆದುಕೊಂಡು ಅನುಚಿತವಾಗಿ ವರ್ತಿಸಿ ಅವ್ಯಾಚ ಶಬ್ದಗಳಿಂದ ನಿಂದಿಸಿರುತ್ತಾರೆ ಎಂದು ಅಬಕಾರಿ ಉಪ ಆಯುಕ್ತರು, ದಕ್ಷಿಣ ಕನ್ನಡ ಜಿಲ್ಲೆ ಇವರು ವರದಿ ಮಾಡಿರುವುದು ನಿಜ. ಕಾರಣ ಎ. ಜೆ. ಶೆಟ್ಟಿಯವರು ಅವರ ಮುಚ್ಚಳಿಕೆ ಪತ್ರದಂತೆ ಸಾರಾಯಿ ಬಾಕಿಯನ್ನು ಸರ್ಕಾರಕ್ಕೆ ಪಾವತಿ ಮಾಡದೇ ಇರುವುದರಿಂದ ಅವರ ರಹದಾರಿ ಪತ್ರಗಳನ್ನು ತಡೆಹಿಡಿದಿದ್ದರು ಎಂಬ ವಿಷಯಕ್ಕಾಗಿ ವಾಗ್ವಾದ. ಈ ಘಟನೆಯ ಬಗ್ಗೆ ಅಬಕಾರಿ ಉಪ ಆಯುಕ್ತರು ಪೋಲೀಸ್ ಇಲಾಖೆಗೆ ಫಿರ್ಯಾದಿ ನೀಡಲು ಯೋಜಿಸಿದಾಗ, ಸದರಿ ಸನ್ನದುದಾರರು ಕ್ಷಮೆಯಾಚಿಸಿದ್ದರಿಂದ ತಮ್ಮ ನಿರ್ಧಾರವನ್ನು ಅಬಕಾರಿ ಉಪ ಆಯುಕ್ತರು ಬದಲಿಸಿ ಅವರಿಗೆ ಎಚ್ಚರಿಕೆ ನೀಡಿ ಕ್ಷಮಿಸಿರುವುದಾಗಿ ಅಬಕಾರಿ ಉಪ ಆಯುಕ್ತರು ವರದಿ ಮಾಡಿದ್ದಾರೆ. ಇದಾದ ನಂತರ ಯಾವುದೇ ಬೆಳವಣಿಗೆಗಳು ಕಂಡುಬಂದಿಲ್ಲ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯನ್ನು ಕೇಳಿರತಕ್ಕಂಥ ಉದ್ದೇಶ ಬೇರೆ ಇತ್ತು. ಏಕೆಂದರೆ ಅಬಕಾರಿ ಇಲಾಖೆಯಲ್ಲಿ ಒಂದಲ್ಲ ಒಂದು ನೆಪದಲ್ಲಿ ಸಾಕಷ್ಟು ಲೀಕೇಜ್ ಆಗುತ್ತಿದೆ ಎನ್ನತಕ್ಕಂಥದ್ದರ ಬಗ್ಗೆ ನಾವು ಪ್ರಸ್ತಾಪ ಮಾಡಬೇಕೆಂದು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆವು. ಈ ಗಮನ ಸೆಳೆಯುವ ಸೂಚನೆಯಲ್ಲಿ ಇದು ಒಂದೇ ಒಂದು ಸೆಪರೇಟ್ ಇಶ್ಯೂ ಆದ ಕಾರಣ ಇವತ್ತು ವ್ಯತ್ಯಾಸ ಆಗಿದೆ. ಏಕೆಂದರೆ, ನಾನು ಕೇಳತಕ್ಕಂಥ ಉದ್ದೇಶ ಏನು ಇತ್ತು ಎಂದರೆ ಎಂ.ಎಸ್.ಐ. ಎಲ್‌ನಲ್ಲಿ ....

MR. SPEAKER : We will do one thing. Shall we take it up in the way you suggest?

SRI M. MALLIKARJUNA KHARGE : O.K.

MR. SPEAKER : I am agreeable, because this serves no purpose. Since the basic purpose is not served, you can give the details. Some mistake has happened. I am willing to take it up on a subsequent date.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಸರಿ..... ಏಕೆಂದರೆ ಇದು ಬೇರೆ ಎಂ.ಎಸ್.ಐ.ಎಲ್. ರೂಲ್ಸ್‌ಗೆ ಲಿಂಕ್ ಇದೆ. ಇದು ಒಂದು ನೆಪ.

ಅಧ್ಯಕ್ಷರು : ನಾನು ಒಪ್ಪಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಬ್ಬ ಕಂಟ್ರಾಕ್ಟರ್ ಈ ರೀತಿಯಾಗಿ ಮಾಡಿರಬಹುದು. ಹತ್ತಾರು ಕಂಟ್ರಾಕ್ಟರುಗಳು ಇದೇ ರೀತಿಯಾಗಿ ಮಾಡುತ್ತಿದ್ದಾರೆ ಮತ್ತು ಎಂ.ಎಸ್.ಐ. ಎಲ್ ಇಲ್ಲೂ ಕೂಡ ರೂಲ್ಸ್ ಬದಲಾವಣೆ ಆದಮೇಲೆ ರೆವಿನ್ಯೂನಲ್ಲಿ ಬಂದಂಥ ಲೀಕೇಜ್ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಹಿಂದಿನ ಮಾನ್ಯ ಪ್ರಧಾನ ಮಂತ್ರಿಗಳಿಗೆ ಹೈಕೋರ್ಟಿನಿಂದ ಈಗಾಗಲೇ ನೋಟೀಸ್ ಕೂಡ ಬಂದಿದೆ. ಅದಕ್ಕಾಗಿ ಪ್ರಸ್ತಾವನೆ ಮಾಡಬೇಕೆಂದು ಹೇಳಿ ಕಳುಹಿಸಿದ್ದೆವು.

MR. SPEAKER : I will take it up.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಮ್ಮ ಅಂತಿಮ ತೀರ್ಮಾನವೇ ತೀರ್ಮಾನ. ಅದರ ಬಗ್ಗೆ ಪ್ರಶ್ನೆ ಇಲ್ಲ. ಪ್ರಾಯಶಃ ಮುಂದೆ ನಮ್ಮ ಸದನದಲ್ಲಿ ಬೇಡಿಕೆಗಳ ಮೇಲೆ ಚರ್ಚೆ ನಡೆಯುವ ಸಮಯದಲ್ಲಿ ಈ ವಿಷಯದ ಮೇಲೆ ವ್ಯಾಪಕವಾಗಿ ಚರ್ಚೆ ಮಾಡಿದರೆ ಸರಿಹೋಗಬಹುದಲ್ಲವೇ?

MR. SPEAKER : They can do.

ಶ್ರೀ ಎಂ.ಪಿ. ಪ್ರಕಾಶ್ : ಏಕೆಂದರೆ ಸಮಯದ ಅಭಾವ ಇರುವುದರಿಂದ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಸಮಯದ ಅಭಾವ ಇದ್ದ ಕಾರಣ ನಮಗೆ ಪ್ರಸ್ತಾಪ ಮಾಡಲು ತೊಂದರೆ ಬಂದಿದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈಗ ಇದನ್ನು ಚರ್ಚೆಗೆ ಪ್ರತ್ಯೇಕವಾಗಿ ತೆಗೆದುಕೊಂಡು ಮತ್ತೆ ಸಮಯವನ್ನು ವ್ಯಯ ಮಾಡುವುದು ಬೇಡ. ಬೇಡಿಕೆ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ಇದನ್ನು ಕೂಡ ಚರ್ಚೆ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಬೇಡಿಕೆ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ಇದನ್ನೂ ಸಹ ಪ್ರಸ್ತಾಪ ಮಾಡಿದಾಗ ಇದಕ್ಕೆ ಸ್ಪೆಸಿಫಿಕ್ ಆಗಿ ಉತ್ತರ ಕೊಟ್ಟರೆ ಪರವಾಗಿಲ್ಲ. ಏನಾಗುತ್ತದೆಂದರೆ ಅಬಕಾರಿ ಇಲಾಖೆಗೆ ತಮಗೆ ಗೊತ್ತಿರುವ ಹಾಗೆ ಸುಮಾರು 840 ಕೋಟಿ ರೂಪಾಯಿ ಹೆಚ್ಚು ಕಡಿಮೆ ಅದರಲ್ಲಿ ಸಾಕಷ್ಟು ಕೋಟ್ಯಾಂತರ ರೂಪಾಯಿ ಲೀಕೇಜ್ ಆಗುವಾಗ ಮತ್ತು ಅದಕ್ಕೆ ರಕ್ಷಣೆ ಮಾಡತಕ್ಕಂಥದ್ದು ಅಥವಾ ಅದರಲ್ಲಿ ಸರ್ಕಾರಕ್ಕೆ ದುಡ್ಡು ಸಿಗುವಾಗಲೂ ಕೂಡ ಅದಕ್ಕೆ ತಿದ್ದುಪಡಿ ತರತಕ್ಕಂಥ ಅವಶ್ಯಕತೆ ಕೂಡ ಇರಲಿಲ್ಲ. ಇದನ್ನು ನಾವು ಪ್ರಸ್ತಾಪ ಮಾಡಿದಾಗ ಇದರ ಬಗ್ಗೆ ಸ್ಪೆಸಿಫಿಕ್ ಆಗಿ ಉತ್ತರ ಕೊಟ್ಟರೆ ಒಳ್ಳೆಯದು. ಉತ್ತರ ಕೊಡುತ್ತಾ ಜನರಲ್ ಆಗಿ ಮಾತನಾಡುವ ಸಂದರ್ಭದಲ್ಲಿ ಡೀವಿಯೇಷನ್ ಮಾಡಿದರೆ....

MR SPEAKER : We will take it up specifically.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಮಾಜವಾದಿ ಮುಖಂಡರು ಎಲ್ಲರೂ ಮುಂದಕ್ಕೆ ಹೋಗಿಬಿಡುತ್ತಾರೆ, ಆ ಉತ್ತರ ಅಲ್ಲಿಯೇ ಉಳಿದುಬಿಡುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಶಾಂಭವಿ ನದಿ ತೀರದಲ್ಲಿ ಸ್ಥಾಪಿಸಲಾಗಿರುವ ಕೈಗಾರಿಕೆಯಿಂದ ಆಗಿರುವ ಮಾಲಿನ್ಯದ ತೊಂದರೆ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಕಾರ್ಕಳ ತಾಲ್ಲೂಕಿನ ಕಡಂದಲೆ ಗ್ರಾಮದ ಕೊಡುಗೆ ಎಂಬ ಸಂಸ್ಥೆಯು ಅಮೇರಿಕಾದ ಏಂಜಲ್ ಹಾರ್ವ್ ಐಲ್ಯಾಂಡ್ (ಪ್ರೈ) ಸಂಸ್ಥೆಯ ಸಹಭಾಗಿತ್ವದಲ್ಲಿ ಡೈ ತಯಾರಿಸಲು ಕಾರ್ಖಾನೆಯನ್ನು ನಿರ್ಮಿಸುತ್ತಿರುವುದರಿಂದ, ಈ ಕಾರ್ಖಾನೆಯ ತ್ಯಾಜ್ಯ ವಸ್ತುಗಳು ನೂರು ಮೀಟರ್ ಹತ್ತಿರದಲ್ಲಿ ಇರುವ ಶಾಂಬವಿ ನದಿಗೆ ಹೋಗಿ